**ಕರ್ನಾಟಕ ರೇಸ್ ಕೋರ್ಸ್‌ಗಳಿಗೆ ಲೈಸೆನ್ಸ್ ನೀಡಿಕೆ ಅಧಿನಿಯಮ, 1952**
**(1952ರ ಕರ್ನಾಟಕ ಅಧಿನಿಯಮ ಸಂ VIII)**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಲೈಸೆನ್ಸ್ ನೀಡಿಲ್ಲದ ರೇಸ್ ಕೋರ್ಸ್‌ನಲ್ಲಿ ಕುದುರೆ ಜೂಜಾಟದ ನಿಷೇಧ
4. ಕುದುರೆ ಜೂಜಾಟಕ್ಕಾಗಿ ಲೈಸೆನ್ಸುಗಳು
5. ಲೈಸೆನ್ಸ್ ನೀಡಿಲ್ಲದ ರೇಸ್ ಕೋರ್ಸ್‌ನಲ್ಲಿ ಕುದುರೆ ಜೂಜಾಟದಲ್ಲಿ ಭಾಗವಹಿಸಿದ್ದಕ್ಕೆ ದಂಡ
6. ಲೈಸೆನ್ಸ್ ನೀಡಿಲ್ಲದ ರೇಸ್ ಕೋರ್ಸ್‌ಗಳಲ್ಲಿ ಜೂಜಾಟವನ್ನು ಅನುಮತಿಸಿದ್ದಕ್ಕಾಗಿ ಮಾಲೀಕ, ಮುಂತಾದವರಿಗೆ ದಂಡ
7. ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘನೆಗಾಗಿ ದಂಡ
8. ಆದೇಶಗಳ ಉಳಿಸುವಿಕೆ
9. ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಸಂಜ್ಞೇಯ
10. ವಿನಾಯಿತಿ
11. ನಿಯಮಗಳ ರಚನಾಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**2011ರ ತಿದ್ದುಪಡಿ ಅಧಿನಿಯಮ 15.-**(i) ಸಮಗ್ರ ಕರ್ನಾಟಕ ರಾಜ್ಯಕ್ಕೆ ಜೂಜು ತೆರಿಗೆ ಅಧಿನಿಯಮ, 1932 ಮತ್ತು ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1952 ಇವುಗಳು ಅನ್ವಯವಾಗುವಂತೆ ವಿಸ್ತರಿಸಲು;

(ii) ಜೂಜು ತೆರಿಗೆ ಅಧಿನಿಯಮ, 1932ರಲ್ಲಿರುವ ಮತ್ತು ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1952ರಲ್ಲಿ ಇರುವ ಕೆಲವು ಅಗತ್ಯವಿಲ್ಲದ ಉಪಬಂಧಗಳನ್ನು ಮತ್ತು ಅನುಸೂಚಿಗಳನ್ನು ಬಿಟ್ಟುಬಿಡಲು;

(iii) ಕೆಲವು ಅಗತ್ಯವಿಲ್ಲದ ಅಧಿನಿಯಮಿತಿಗಳನ್ನು ನಿರಸನಗೊಳಿಸಲು; ಮತ್ತು

(iv) ಆಯವ್ಯಯದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯಗತಗೊಳಿಸಲು,

-ಮೈಸೂರು ಜೂಜು ತೆರಿಗೆ ಅಧಿನಿಯಮ, 1932, ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1932, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976, ಕರ್ನಾಟಕ ಭೋಗ ವಸ್ತುಗಳ ತೆರಿಗೆ ಅಧಿನಿಯಮ, 1979 ಮತ್ತು ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನ ಸಭೆ ವಿಧೇಯಕ ಸಂಖ್ಯೆ 11, ಕಡತ ಸಂ.ಸಂವ್ಯಶಾಇ 13 ಶಾಸನ 2011]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 34, 52, 60 ಮತ್ತು 62ಗಳಲ್ಲಿನ ನಮೂದು]

II

**2020ರ ತಿದ್ದುಪಡಿ ಅಧಿನಿಯಮ 23.-**ಕುದುರೆ ರೇಸಿಂಗ್‌ನ ಪರವಾನಗಿ ನೀಡುವಿಕೆ, ನಿಯಂತ್ರಣ ಮತ್ತು ವ್ಯವಸ್ಥಾಪನೆಯನ್ನು ಉತ್ತಮವಾಗಿ ನಿರ್ವಹಿಸುವ ಹಿತದೃಷ್ಟಿಯಲ್ಲಿ ಸರ್ಕಾರವು ಅಧಿಕೃತಗೊಳಿಸುವ ಅಧಿಕಾರಿಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಹಾಗೂ ಪ್ರಸ್ತುತ ಹಣ ಮೌಲ್ಯಕ್ಕೆ ಸಮಾನವಾಗಿ ದಂಡನೆಯ ಮೊತ್ತವನ್ನು ಹೆಚ್ಚಿಸಲು ಉಪಬಂಧ ಕಲ್ಪಿಸುವುದಕ್ಕೆ ಕರ್ನಾಟಕ ರೇಸ್‌ಕೋರ್ಸುಗಳ ಪರವಾನಗಿ ನೀಡುವ ಅಧಿನಿಯಮ, 1952ನ್ನು (1952ರ ಕರ್ನಾಟಕ ಅಧಿನಿಯಮ VIII) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನ ಸಭೆ ವಿಧೇಯಕ ಸಂಖ್ಯೆ 14, ಕಡತ ಸಂ.ಸಂವ್ಯಶಾಇ 09 ಶಾಸನ 2020]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 34ನೇ ನಮೂದು]

[ಕರ್ನಾಟಕ ಸರ್ಕಾರಿ ವಿಶೇಷ ರಾಜ್ಯಪತ್ರದ ಸಂಖ್ಯೆ 478ರ ಭಾಗ IVಎ ದಿನಾಂಕ 19.10.2020ರಲ್ಲಿ ಪ್ರಕಟಿಸಲಾಗಿದೆ.]

# [1][ಕರ್ನಾಟಕ][1] ರೇಸ್ ಕೋರ್ಸುಗಳಿಗೆ ಲೈಸೆನ್ಸ್ ನೀಡಿಕೆ ಅಧಿನಿಯಮ, 1952

(1952ರ ಫೆಬ್ರುವರಿ ಇಪ್ಪತ್ತೊಂದನೇ ದಿನಾಂಕದಂದು ಸನ್ಮಾನ್ಯ ಮಹಾರಾಜರ ಒಪ್ಪಿಗೆಯನ್ನು ಪಡೆಯಲಾಗಿದೆ)
(1974ರ 7, 2011ರ 15 ಮತ್ತು 2020ರ 23ರಲ್ಲಿ ತಿದ್ದುಪಡಿಯಾದಂತೆ)

ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ [1][ಕರ್ನಾಟಕ][1] ರಾಜ್ಯದಲ್ಲಿ ರೇಸ್ ಕೋರ್ಸ್‌ಗಳಿಗೆ ಲೈಸೆನ್ಸು ನೀಡುವುದನ್ನು ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಬಳ್ಳಾರಿ ಜಿಲ್ಲೆಯಲ್ಲಿ ಹೊರತುಪಡಿಸಿ [1][ಕರ್ನಾಟಕ][1] ರಾಜ್ಯದಲ್ಲಿನ ರೇಸ್ ಕೋರ್ಸ್‌ಗಳಿಗೆ ಲೈಸೆನ್ಸ್ ನೀಡಿಕೆ, ವಿನಿಯಮನ, ನಿಯಂತ್ರಣ ಮತ್ತು ವ್ಯವಸ್ಥಾಪನೆ ಹಾಗೂ ಅದಕ್ಕೆ ಸಂಬಂಧಿಸಿರುವ ಎಲ್ಲಾ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದನ್ನು ಈ ಮೂಲಕ ಮುಂದಿನಂತೆ ಅಧಿನಿಯಮಗೊಳಿಸಲಾಗಿದೆ,-

1. 2011ರ ಅಧಿನಿಯಮ 15ರ ಮೂಲಕ ದಿನಾಂಕ 1.4.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು [1][ಕರ್ನಾಟಕ][1] ರೇಸ್ ಕೋರ್ಸ್ ಗಳಿಗೆ ಲೈಸೆನ್ಸ್ ನೀಡಿಕೆ ಅಧಿನಿಯಮ, 1952 ಎಂದು ಕರೆಯತಕ್ಕದ್ದು.

[1][(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು][1]

1. 2011ರ ಅಧಿನಿಯಮ 15ರ ಮೂಲಕ ದಿನಾಂಕ 1.4.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. ಪರಿಭಾಷೆಗಳು**.- ಈ ಅಧಿನಿಯಮದಲ್ಲಿ,-

(1) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(2) "ಕುದುರೆ ಜೂಜಾಟ" ಎಂದರೆ, ಯಾವುದೇ ಕುದುರೆ, ಹೆಣ್ಣುಕುದುರೆ ಅಥವಾ ಗಂಡುಕುದುರೆಯು ಯಾವುದೇ ಇತರ ಕುದುರೆ, ಹೆಣ್ಣುಕುದುರೆ ಅಥವಾ ಗಂಡುಕುದುರೆಯೊಂದಿಗೆ ಸ್ಪರ್ಧೆಯಲ್ಲಿ ಯಾವುದೇ ಸ್ವರೂಪದ ಅಥವಾ ವಿಧದ ಬಹುಮಾನಕ್ಕಾಗಿ ಓಡಿದ ಅಥವಾ ಓಡುವಂತೆ ಮಾಡಿರುವ ಅಥವಾ ಯಾವುದೇ ಅಂಥ ಕುದುರೆ, ಹೆಣ್ಣುದುರೆ ಅಥವಾ ಗಂಡುಗುದುರೆ ಅಥವಾ ಅದರ ಸವಾರರ ಸಂಬಂಧದಲ್ಲಿ ಯಾವುದೇ ಜೂಜು ಅಥವಾ ಪಣವನ್ನು ಮಾಡಿದ ಅಥವಾ ಮಾಡುವಂತೆ ಮಾಡಿದ ಮತ್ತು ಇಪ್ಪತ್ತಕ್ಕೂ ಹೆಚ್ಚು ಜನರು ಹಾಜರಿರುವ ಓಟದ ಸ್ಪರ್ಧೆ;

(3) "ಲೈಸೆನ್ಸ್" ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಿದ ಲೈಸೆನ್ಸ್;

(4) "ಲೈಸೆನ್ಸುದಾರ" ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸು ನೀಡಲಾದ ವ್ಯಕ್ತಿ;

( 5) "ಪರ್ಮಿಟ್ಟು" ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಒಬ್ಬ ಬಾಜಿದಾರನಿಗೆ ಮಂಜೂರು ಮಾಡಿದ ಪರ್ಮಿಟ್ಟು;

(6) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಿಯಮಗಳ ಮೂಲಕ ನಿಯಮಿಸಲಾದುದು;

(7) "ರೇಸ್ ಕೋರ್ಸ್" ಎಂದರೆ, ಕುದುರೆ ಜೂಜಾಟವು ನಡೆಯುವ ಯಾವುದೇ ಮೈದಾನ.

**3. ಲೈಸೆನ್ಸ್ ನೀಡಿಲ್ಲದ ರೇಸ್ ಕೋರ್ಸ್‌ಗಳಲ್ಲಿ ಕುದುರೆ ಜೂಜಾಟದ ನೀಷೇಧ.-** ಜಾರಿಯಲ್ಲಿರುವ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಕುದುರೆ ಜೂಜಾಟಕ್ಕೆ ಲೈಸೆನ್ಸು ಮಂಜೂರು ಮಾಡಿದ ರೇಸು ಕೋರ್ಸ್‌ನ ಹೊರತು ಕುದುರೆ ಜೂಜಾಟವನ್ನು ನಡೆಸತಕ್ಕದ್ದಲ್ಲ.

**4. ಕುದುರೆ ಜೂಜಾಟಕ್ಕಾಗಿ ಲೈಸೆನ್ಸುಗಳು.-** (1) ಯಾವುದೇ ರೇಸ್ ಕೋರ್ಸ್ನ ಮಾಲೀಕ, ಗೇಣಿದಾರ ಅಥವಾ ಅಧಿಬೋಗದಾರನು, ಅಂಥ ರೇಸ್ ಕೋರ್ಸ್‌ನಲ್ಲಿ ಕುದುರೆ [1][ಅಥವಾ ಎರಡೂ ಕಡೆಗಳ ರಾಜ್ಯದ ಒಳಗೆ ಅಥವಾ ರಾಜ್ಯದ ಹೊರಗಿನ ಅಂಥ ರೇಸ್ ಕೋರ್ಸಿನಲ್ಲಿ ಪಣ ಕಟ್ಟುವಿಕೆ ಅಥವಾ ಬಾಜಿಕಟ್ಟುವಿಕೆಯನ್ನು ವ್ಯವಸ್ಥೆಗೊಳಿಸುವುದಕ್ಕೆ][1] ಲೈಸೆನ್ಸ್‌ಗಾಗಿ ಸರ್ಕಾರ [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಗೆ][2] ಅರ್ಜಿಯನ್ನು ಸಲ್ಲಿಸತಕ್ಕದ್ದು.

1. 1974ರ ಅಧಿನಿಯಮ 7ರನ್ವಯ 29.11.1973ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಿಕೊಳ್ಳತಕ್ಕದ್ದು.

(2) ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][2], ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ ಅಂಥ ಲೈಸೆನ್ಸನ್ನು ತಡೆಹಿಡಿಯಬಹುದು ಅಥವಾ ಮಂಜೂರು ಮಾಡಬಹುದು.

(3) ನಿರ್ಧಿಷ್ಟವಾಗಿ ಮತ್ತು ಹಿಂದಿನ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ಷರತ್ತುಗಳನ್ನು ಈ ಮುಂದಿನವುಗಳಿಗಾಗಿ ಉಪಬಂಧಿಸಬಹುದು,-

(ಎ) ಲೈಸೆನ್ಸು ಶುಲ್ಕ ಪಾವತಿಸಲು;

(ಬಿ) ಜೂಜು ತೆರಿಗೆ ಅಧಿನಿಯಮ, 1932ರ ಮೂಲಕ ಅಗತ್ಯಪಡಿಸಲಾದಂತೆ ಅಂಥ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಅಂಥ ರಿಟರ್ನ್‌ಗಳನ್ನು ಒದಗಿಸಲು;

(ಸಿ) ವಿವಿಧ ಬಗೆಯ ಕುದುರೆಗಳಿಗಾಗಿ ಹಂಚಿಕೆ ಮಾಡಿದ ಬಾಜಿಪಾಲುಗಳ ಮೊತ್ತ;

(ಡಿ) ಜಾಕಿಗಳಾಗುವ ವ್ಯಕ್ತಿಯ ತರಬೇತಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು;

(ಇ) ಭಾರತೀಯ ತಳಿಯ ಕುದುರೆಗಳು ಮತ್ತು ಭಾರತೀಯ ಜಾಕಿಗಳನ್ನು ಪ್ರೋತ್ಸಾಹಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು;

(ಎಫ್) ಕುದುರೆ ಜೂಜಾಟದ ನಿರ್ವಹಣೆ ಮತ್ತು ವ್ಯವಸ್ಥಾಪನೆಯಲ್ಲಿ ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][2] ನಾಮನಿರ್ದೇಶಿಸಬಹುದಾದಂಥ ವ್ಯಕ್ತಿಗಳನ್ನು ಮೇಲ್ವಿಚಾರಕರು (Stewards) ಅಥವಾ ಸದಸ್ಯರುಗಳಾಗಿ ವ್ಯಕ್ತಿಗಳನ್ನು ಸೇರಿಸಿಕೊಳ್ಳಲು ಅಥವಾ ಜೊತೆಗೂಡಿಸಲು;

(ಜಿ) ಕುದುರೆ ಜೂಜಾಟದ ನಿರ್ವಹಣೆ ಮತ್ತು ವ್ಯವಸ್ಥಾಪನೆಯಲ್ಲಿ ಲೈಸೆನ್ಸುದಾರನು ಸಂಗ್ರಹಿಸಿದ ಮೊತ್ತವನ್ನು ಉಪಯೋಗಿಸಲು;

(ಹೆಚ್) ಲೈಸೆನ್ಸಿನಲ್ಲಿ ಉಪಬಂಧವನ್ನು ರಚಿಸಲು ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][2] ಅಗತ್ಯ ಅಥವಾ ಯುಕ್ತವೆಂದು ಅಭಿಪ್ರಾಯಪಟ್ಟ ಕುದುರೆ ಜೂಜಾಟದ ಮತ್ತು ರೇಸ್ ಕೋರ್ಸಿನ ನಿರ್ವಹಣೆಗೆ ಸಂಬಂಧಿಸಿದಂಥ ಇತರೆ ವಿಷಯಗಳು.

(4) ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿ ಅಧಿಕಾರಿಯು][2], ಅಂಥ ಲೈಸೆನ್ಸಿನ ಮೂಲಕ, ಲೈಸೆನ್ಸುದಾರನು ಸೂಕ್ತವೆಂದು ಭಾವಿಸಬಹುದಾದ ಅವಧಿಗಾಗಿ, ಮಂಜೂರಾದ ಲೈಸೆನ್ಸು ಮೀರದಂಥ ಅವಧಿಗಾಗಿ, ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][2] ಅಂಥ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಷರತ್ತಿಗೊಳಪಟ್ಟು, ಲೈಸೆನ್ಸು ಬಾಜಿದಾರನಿಗೆ ಪರ್ಮಿಟನ್ನು ಮಂಜೂರು ಮಾಡಲು ಅಧಿಕಾರವನ್ನು ನೀಡಬಹುದು.

(5) ಸರ್ಕಾರವು [2][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][2] ಯಾವುದೇ ಸಮಯದಲ್ಲಿ ಯಾವುದೇ ಲೈಸೆನ್ಸು ಅಥವಾ ಪರ್ಮಿಟ್ಟಿನಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಷರತ್ತುಗಳನ್ನು ತಡೆಹಿಡಿಯಬಹುದು, ರದ್ದುಪಡಿಸಬಹುದು ಅಥವಾ ಮಾರ್ಪಾಡು ಮಾಡಬಹುದು.

(6) ಯಾವುದೇ ಲೈಸೆನ್ಸಿನ ಮಂಜೂರಾತಿ, ರದ್ದುಪಡಿಸುವಿಕೆ ಅಥವಾ ಮಾರ್ಪಾಡು ಗೊಳಿಸುವುದನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು.

2. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**5. ಲೈಸೆನ್ಸು ನೀಡಿಲ್ಲದ ರೇಸ್ ಕೋರ್ಸಿನ ಜೂಜಾಟದಲ್ಲಿ ಭಾಗವಹಿಸಿದಕ್ಕಾಗಿ ದಂಡ.-** ಲೈಸೆನ್ಸು ಮಂಜೂರು ಮಾಡದೇ ಇರುವ ಯಾವುದೇ ರೇಸ್‌ಕೋರ್ಸಿನ ಅಥವಾ 4ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಮಂಜೂರು ಮಾಡಿದ ಲೈಸೆನ್ಸು ಜಾರಿಯಲ್ಲಿಲ್ಲದ ರೇಸ್ ಕೋರ್ಸಿನ ಯಾವುದೇ ಕುದುರೆ ಜೂಜಾಟದಲ್ಲಿ ಭಾಗವಹಿಸಿದವನು [1][ಐವತ್ತು ಸಾವಿರ ರೂಪಾಯಿಗಳಿಗೆ][1] ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

1. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಲೈಸೆನ್ಸು ನೀಡಿಲ್ಲದ ರೇಸ್ ಕೋರ್ಸ್‌ನಲ್ಲಿ ಜೂಜಾಟಕ್ಕೆ ಅನುಮತಿ ನೀಡಿದ್ದಕ್ಕಾಗಿ ಮಾಲೀಕ ಮುಂತಾದವರಿಗೆ ದಂಡ.-** ಲೈಸೆನ್ಸು ಮಂಜೂರಾಗದಿರುವ ಅಥವಾ ಮಂಜೂರಾದ ಲೈಸೆನ್ಸು ಜಾರಿಯಲ್ಲಿರದ ಯಾವುದೇ ರೇಸ್ ಕೋರ್ಸಿನಲ್ಲಿ ಯಾವುದೇ ಕುದುರೆ ಜೂಜಾಟ ನಡೆಸಿದ್ದಲ್ಲಿ ಅಂಥ ರೇಸ್ ಕೋರ್ಸಿನ ಮಾಲೀಕ, ಗೇಣಿದಾರ ಅಥವಾ ಅಧಿಭೋಗದಾರನಾದ ಯಾವೊಬ್ಬ ವ್ಯಕ್ತಿಯು [1][ಒಂದು ಲಕ್ಷ ರೂಪಾಯಿಗಳಿಗೆ][1] ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

1. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಲೈಸೆನ್ಸು ಷರತ್ತುಗಳನ್ನು ಉಲ್ಲಂಘನೆಗೆ ದಂಡ.-** (1)ಲೈಸೆನ್ಸು ಮಂಜೂರು ಮಾಡಲಾದ ಯಾವುದೇ ವ್ಯಕ್ತಿಯು, ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಲೈಸೆನ್ಸನ್ನು ಮಂಜೂರು ಮಾಡಲಾಗಿದೆಯೋ ಆ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ, 4ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು [1][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][1], ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, [2][ಒಂದು ಲಕ್ಷ ರೂಪಾಯಿಗಳಿಗೆ][2] ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) ಲೈಸೆನ್ಸುದಾರನು ಮಂಜೂರು ಮಾಡಿದ ಪರ್ಮಿಟ್ಟನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯು, ಮಂಜೂರು ಮಾಡಿದ ಅಂಥ ಪರ್ಮಿಟ್ಟಿಗೆ ಒಳಪಡುವ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ, 4ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು [1][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು][1], ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, [2][ಒಂದು ಲಕ್ಷ ರೂಪಾಯಿಗಳಿಗೆ][2] ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

1. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**8. ಆದೇಶಗಳ ಉಳಿಸುವಿಕೆ.-** ಲೈಸನ್ಸಿನ ಮಂಜೂರಾತಿ, ತಿರಸ್ಕರಿಸುವಿಕೆ ಅಥವಾ ರದ್ದುಪಡಿಸುವಿಕೆ ಹಾಗೂ ಲೈಸೆನ್ಸು ಅಥವಾ ಪರ್ಮಿಟ್ಟಿನ ಮಂಜೂರಾತಿಗೆ ಒಳಪಡುವ ಷರತ್ತುಗಳು

ಸರ್ಕಾರ [1][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯ)][1] ವಿವೇಚನೆಯಲ್ಲಿ ಇರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಾಗತಕ್ಕದ್ದಲ್ಲ.

1. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**9. ಅಧಿನಿಯಮದ ಅಡಿಯಲ್ಲಿನ ಅಪರಾಧದ ಸಂಜ್ಞೇಯತೆ.-** ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳಗಿನ ನ್ಯಾಯಾಲಯದಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದ [1][ಅಥವಾ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯ)][1] ಪೂರ್ವ ಮಂಜೂರಾತಿಯ ಹೊರತು ಯಾವುದೇ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡತಕ್ಕದ್ದಲ್ಲ.

1. 2020ರ ಅಧಿನಿಯಮ 23ರ ಮೂಲಕ 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಅಧಿನಿಯಮದ ಅಡಿಯಲ್ಲಿನ ಎಲ್ಲ ಅಪರಾಧಗಳು ರಾಜಿ ಮಾಡಿಕೊಳ್ಳಬಹುದಾಗಿರತಕ್ಕದ್ದು.

**10. ವಿನಾಯಿತಿ.-** ಸರ್ಕಾರವು, ಮೈಸೂರು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಅಧಿನಿಯಮದ ಕಾರ್ಯನಿರ್ವಹಣೆಯಿಂದ ಯಾವುದೇ ಕುದುರೆ ಜೂಜಾಟವನ್ನು ವಿನಾಯಿತಿಸಬಹುದು.

**11. ನಿಯಮಗಳನ್ನು ರಚಿಸುವ ಅಧಿಕಾರ.-** (1) ಮೈಸೂರು ರಾಜ್ಯಪತ್ರದಲ್ಲಿ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಮುಂದಿನ ಎಲ್ಲ ಅಥವಾ ಯಾವುದಾದರೂ ವಿಷಯಗಳಿಗಾಗಿ ಅಂಥ ನಿಯಮಗಳನ್ನು ಉಪಬಂಧಿಸಬಹುದು ಎಂದರೆ:-

(i ) ಲೈಸೆನ್ಸುಗಳಿಗಾಗಿ ಅರ್ಜಿಗಳನ್ನು ಕರೆಯಬೇಕಾದ ನಮೂನೆ ಮತ್ತು ವಿಧಾನ;

(ii) [1][ಅಂಥ ಲೈಸೆನ್ಸುಗಳಿಗಾಗಿ][1] ಪಾವತಿಸಬಹುದಾದ ಶುಲ್ಕಗಳು;

(iii) ಅಂಥ ಲೈಸೆನ್ಸುಗಳನ್ನು ಮಂಜೂರು ಮಾಡಬೇಕಾದ ಅವಧಿ;

(iv) ಲೈಸೆನ್ಸುಗಳ ನವೀಕರಣ, ಮಾರ್ಪಾಡು ಮತ್ತು ರದ್ದುಪಡಿಸುವಿಕೆ.

1.1974ರ ಅಧಿನಿಯಮದ ಮೂಲಕ 29.11.1973ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸಲಾಗಿದೆ.

**[1][12. XXX][1]**

**[1][13. XXX][1]**

**[1][14. XXX][1]**

1. 2011ರ ಅಧಿನಿಯಮ 15ರ ಮೂಲಕ 01.4.2011 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

[1][**ಅನುಸೂಚಿ** XXX][1]

1. 2011ರ ಅಧಿನಿಯಮ 15ರ ಮೂಲಕ 01.4.2011 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

The above translation of the Karnataka Race Courses Licensing Act, 1952 (Karnataka Act VIII of 1952) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ